

## ಸ್ನೂಪ್‌ಸ್ನಿಚ್

ಇದು ನಿಮ್ಮ ಮೊಬೈಲ್ ಫೋನ್ ಸಂಭಾಷಣೆ ಕದ್ದಾಲಿಸುವವರ ವಿರುದ್ಧ ರಕ್ಷಣೆ ನೀಡುವ ಆ್ಯಪ್. ಅಂತರರಾಷ್ಟ್ರೀಯ ಮೊಬೈಲ್ ಚಂದಾದಾರರ ಗುರುತನ್ನು ಪತ್ತೆ ಮಾಡುವವರನ್ನು (ಐಎಂಎಸ್ಐ) ಹಿಡಿಯುತ್ತದೆ. ಈ ಗುಂಪಿನವರು ಫೋನ್ ಸಂಭಾಷಣೆ ಕದ್ದಾಲಿಸಿ ಫೋನ್ ನೆಟ್‌ವರ್ಕ್ ಅನ್ನು ಬಂದ್ ಮಾಡುತ್ತಾರೆ; ಟೆಕ್ಸ್ಟ್ ಮೆಸೇಜ್ ಓದುತ್ತಾರೆ; ಬಳಕೆದಾರರ ಚಲನವಲನದ ಮೇಲೆ ನಿಗಾ ಇಡುತ್ತಾರೆ ಎಂಬ ಆರೋಪಗಳಿವೆ. ಹ್ಯಾಕ್ ಮಾಡುವವರು ಈ ವಿವರಗಳನ್ನು ಪಡೆಯಬಹುದು. ಇಂಥವರ ವಿರುದ್ಧ ಈ ಆ್ಯಪ್ ರಕ್ಷಣೆ ನೀಡುತ್ತದೆ. ಇದು ಐಎಂಎಸ್ಐ ಗುಂಪಿನವರನ್ನು ಪತ್ತೆ ಮಾಡಿ ಬಳಕೆದಾರರನ್ನು ಎಚ್ಚರಿಸುತ್ತದೆ. ಮೊಬೈಲ್ ಗೋಪುರದಿಂದ ಪಡೆಯುವ ಸಂಕೇತಗಳನ್ನು ಈ ಆ್ಯಪ್ ಪರಿಶೀಲಿಸುತ್ತದೆ.

## ಕ್ಲೆವರ್ ಐಫೋನ್ ಅಲಾರ್ಮ್ ಆ್ಯಪ್




'ರೈಸ್ ಆ್ಯಂಡ್ ಶೈನ್' ಎಂದೇ ಖ್ಯಾತವಾಗಿರುವ ಈ ಆ್ಯಪ್ ಬೆಳಿಗ್ಗೆ ಅಲಾರ್ಮ್ ಬಂದ್ ಮಾಡುವಾಗ ಬಳಕೆದಾರರ ನಗು ಮೊಗವನ್ನು ಫ್ರಂಟ್ ಕ್ಯಾಮೆರಾ ಮೂಲಕ ಸೆರೆ ಹಿಡಿಯುತ್ತದೆ. ಬಂದ್ ಮಾಡುವ ಬಳಕೆದಾರರು ನಗುತ್ತಿದ್ದಾರೋ ಇಲ್ಲವೋ ಎಂಬುದನ್ನು ಕ್ಯಾಮೆರಾ ಗುರುತಿಸುತ್ತದೆ. ಹಣೆ ಸಿಂಡರಿಸಿಕೊಂಡಿದ್ದರೆ ಅಲಾರ್ಮ್ ಬಂದ್ ಆಗುವುದೇ ಇಲ್ಲ. ಬಳಕೆದಾರರು ಪ್ರತಿ ದಿನ ಬೆಳಿಗ್ಗೆ ಮುಗುಳ್ನಗುವಿನೊಂದಿಗೆ ಏಳಬೇಕು, ಒತ್ತಡ ಹೊರಹಾಕಬೇಕು ಎಂಬುದೇ ನಮ್ಮ ಗುರಿ ಎಂದು ಆ್ಯಪ್ ಸಿದ್ಧಪಡಿಸಿದವರ ಹೇಳಿಕೆ.



## ಸ್ಟ್ರಿಂಗ್ಸ್

ಇದು ನಿಮ್ಮ ಟೆಕ್ಸ್ಟ್ ಮೆಸೇಜ್‌ಗಳ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿದ್ದು, ಕಳಿಸಿದ ಸಂದೇಶವನ್ನೂ ವಾಪಸ್ಸು ಪಡೆಯಬಹುದು. ಈ ಸಂದೇಶವನ್ನು ಯಾರು ಪಡೆಯುತ್ತಾರೆ ಅಥವಾ ಹೆಚ್ಚು ಮಂದಿಗೆ ಸಂದೇಶಗಳು ರವಾನೆಯಾಗುತ್ತಿವೆಯೇ ಅಥವಾ ತೀರಾ ಖಾಸಗಿಯಾಗಿ ಸಂದೇಶಗಳು ವಿನಿಯಮವಾಗುತ್ತಿವೆಯೆ ಎಂಬುದನ್ನು ಈ ಆ್ಯಪ್ ಗ್ರಹಿಸುತ್ತದೆ. ಈ ಆ್ಯಪ್ ಮೂಲಕ ಬಳಕೆದಾರರು ವಿಡಿಯೊ ಹಾಗೂ ಹೆಚ್ಚು ರೆಸೊಲ್ಯುಷನ್ ಇರುವ ಫೋಟೋಗ್ರಾಫ್‌ಗಳನ್ನೂ ಬಳಸಬಹುದು. ಆದರೆ ಒಂದು ಸಂದೇಶವನ್ನು ಅಳಿಸಿ ಹಾಕಿದರೆ ಅದಕ್ಕೆ ಹೊಂದಿಕೊಂಡಂತಹ ಎಲ್ಲಾ ವಿಷಯಗಳೂ ಆ್ಯಪ್ ಸರ್ವರ್‌ನಿಂದಲೇ ಅಳಿಸಿ ಹೋಗುತ್ತವೆ.



## ಸ್ಕ್ಯಾನೇಬಲ್

ಎವರ್‌ನೋಟ್ ಹೊರ ತಂದಿರುವ ಈ ಆ್ಯಪ್ ಅನ್ನು ಐಫೋನ್ ಅಥವಾ ಐಪ್ಯಾಡ್‌ನಲ್ಲಿ ದಾಖಲೆಗಳನ್ನು ಸ್ಕ್ಯಾನ್ ಮಾಡಲು ಬಳಸಬಹುದು. ಈ ಆ್ಯಪ್‌ನಿಂದ ಕಾಗದದ ಮೇಲಿರುವ ಅಕ್ಷರಗಳನ್ನು ಸ್ಕ್ಯಾನ್ ಮಾಡಿದರೆ ಅಕ್ಷರಗಳು ಮಾತ್ರ ಸ್ಕ್ಯಾನ್ ಆಗುತ್ತವೆಯೇ ಹೊರತು ಕಾಗದವಲ್ಲ. ಇದಲ್ಲದೇ ದಾಖಲೆಗಳತ್ತ ಫೋನ್ ಹಿಡಿದರಾಯಿತು, ಉಳಿದ ಕೆಲಸವನ್ನು ಆ್ಯಪ್ ಮಾಡುತ್ತದೆ. ಅಂದರೆ ನಿಮಗೆ ಬೇಕಾದ ದಾಖಲೆಯನ್ನು ಅದು ಸೆರೆ ಹಿಡಿದು ಸೂಕ್ತ ಟ್ರೇನಲ್ಲಿ ಸಂಗ್ರಹಿಸುತ್ತದೆ. ಈ ಕಾಪಿಯನ್ನು ಇಮೇಜ್ ರೂಪದಲ್ಲಿ ಕಾಪಿಡಬಹುದು ಅಥವಾ ಪಿಡಿಎಫ್ ಕೂಡಾ ಮಾಡಬಹುದು. ಜೊತೆಗೆ ಸಾಮಾನ್ಯ ದಾಖಲೆ ಹಾಗೂ ಬ್ಯುಸಿನೆಸ್ ಕಾರ್ಡ್ ಮಧ್ಯೆ ಇರುವ ವ್ಯತ್ಯಾಸವನ್ನು ಅದು ಗುರುತಿಸುತ್ತದೆ. ಹೊಸ ಕಾಂಟ್ಯಾಕ್ಟ್ ವಿವರಗಳನ್ನು ಬಳಕೆದಾರರ ಕಾಂಟ್ಯಾಕ್ಟ್ ಪಟ್ಟಿಯಲ್ಲಿ ಸೇರಿಸುತ್ತದೆ. ನಿಮ್ಮ ಲಿಂಕ್ಡ್‌ಇನ್ ಖಾತೆಗೆ ಎವರ್‌ನೋಟ್ ಆ್ಯಪ್ ಲಗತ್ತಾಗಿದ್ದರೆ ಅಲ್ಲಿಯೂ ಕಾಂಟ್ಯಾಕ್ಟ್ ವಿವರವನ್ನು ಸೇರಿಸುತ್ತದೆ.

■ ಎಸ್. ತುಂಬೆ